# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಖಾಸಗಿ ಅನುದಾನಿತ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿನ ಹೆಚ್ಚುವರಿ ವಿಭಾಗ :: ವಿಷಯಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ.

— — —

**ಪ್ರಸ್ತಾವನೆ:—**

ಆರ್ಥಿಕ ಮಿತವ್ಯಯ ಆದೇಶಗಳ ಹಿನ್ನೆಲೆಯಲ್ಲಿ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚುವರಿ ವಿಭಾಗ :: ವಿಷಯಗಳನ್ನು ಶಾಶ್ವತ ಅನುದಾನ ರಹಿತವಾಗಿ ಮಂಜೂರು ಮಾಡಲಾಗುತ್ತಿದೆ. ಇದರಿಂದಾಗಿ ಒಂದೇ ಸಂಸ್ಥೆಯಲ್ಲಿ ಅನುದಾನಿತ ವಿಭಾಗ :: ವಿಷಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅನುದಾನದಿಂದ ವಂಚಿತರಾಗುತ್ತಿರುವ ಪರಿಸ್ಥಿತಿ ಉಂಟಾಗಿದೆ. ಹೆಚ್ಚುವರಿ ವಿಭಾಗ :: ವಿಷಯಗಳಿಗೆ ನೇಮಕವಾದವರಿಗೂ ಸಹ ಅನುದಾನವನ್ನು ನೀಡುವಂತೆ ಕೋರಿ ಹಲವಾರು ಮನವಿಗಳು ಸರ್ಕಾರಕ್ಕೆ ಬಂದಿವೆ. ಸರ್ಕಾರವು ಈ ಬಗ್ಗೆ ವಿವರವಾಗಿ ಪರಿಶೀಲಿಸಿ ಈ ಸಮಸ್ಯೆಯನ್ನು ಹಂತಹಂತವಾಗಿ ನಿವಾರಿಸುವ ಸಲುವಾಗಿ ಸೂತ್ರವನ್ನು ರೂಪಿಸಿದೆ. ಅದರಂತೆ, ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 155 ಎಸ್ ಓ ಹೆಚ್95 (ಭಾ), ಬೆಂಗಳೂರು, ದಿನಾಂಕ 28·10·1996**

ಖಾಸಗಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಸಲುವಾಗಿ 1996·97ನೇ ಸಾಲಿನ ಆರ್ಥಿಕ ವರ್ಷದ ಮತ್ತು ಮುಂದಿನ ಪ್ರತಿ ಆರ್ಥಿಕ ವರ್ಷದ ಆಯವ್ಯಯದ ಅಂದಾಜುಗಳ ಯೋಜನೆಯಡಿಯಲ್ಲಿ ಸಂಬಂಧಿಸಿದ ಲೆಕ್ಕ ಶೀರ್ಷಿಕೆಯಲ್ಲಿ ಒದಗಿಸಲಾದ ಹಣದಲ್ಲಿ ಶೇಕಡಾ 3ರಷ್ಟನ್ನು ಅನುದಾನಿತ ಖಾಸಗಿ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಶಾಶ್ವತ ಅನುದಾನ ರಹಿತವಾಗಿ ಮಂಜೂರಾಗಿರುವ ಹೆಚ್ಚುವರಿ ವಿಭಾಗಗಳು :: ವಿಷಯಗಳೂ ಸೇರಿದಂತೆ ಹೆಚ್ಚುವರಿ ವಿಭಾಗ :: ವಿಷಯಗಳನ್ನು ಅನುದಾನಕ್ಕೆ ಒಳಪಡಿಸಲು ಮೀಸಲಿರಿಸಿ ಸದರಿ ಮೊತ್ತದಲ್ಲಿ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅನುದಾನಕ್ಕೆ ಒಳಪಡಿಸತಕ್ಕದೆಂದು ಆದೇಶಿಸಲಾಗಿದೆ.

**ಷರತ್ತುಗಳು:—**

1. ಹೆಚ್ಚುವರಿ ವಿಭಾಗಗಳು : ವಿಷಯಗಳನ್ನು ಕಟ್ಟುನಿಟ್ಟಾಗಿ ಜ್ಯೇಷ್ಠತೆಯ ಆಧಾರದ ಮೇಲೆ ಅಂದರೆ ಶಿಕ್ಷಕರು : ಉಪನ್ಯಾಸಕರು ನೇಮಕಾತಿ ಹೊಂದಿದ ದಿನಾಂಕದ ಆಧಾರದ ಮೇಲೆ ಪರಿಗಣಿಸಿ ಅನುದಾನಕ್ಕೆ ಒಳಪಡಿಸತಕ್ಕದ್ದು;

2. ದಿನಾಂಕ 1—1—1996ರವರೆಗೆ ಮಂಜೂರಾದ ಹೆಚ್ಚುವರಿ ವಿಭಾಗ : ವಿಷಯಗಳು ಈ ಆದೇಶದ ವ್ಯಾಪ್ತಿಗೆ ಒಳಪಡುತ್ತವೆ;

3. ಇನ್ನು ಮುಂದೆ ಯಾವುದೇ ಹೆಚ್ಚುವರಿ ವಿಭಾಗ : ವಿಷಯಗಳನ್ನು ಸರ್ಕಾರದ ನಿರ್ದಿಷ್ಟ ಪೂರ್ವಾನುಮತಿ ಇಲ್ಲದೇ ತೆರೆಯತಕ್ಕದ್ದಲ್ಲ;

4. ಸಂಯುಕ್ತ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಸರ್ಕಾರಿ ಆದೇಶ ಸಂಖ್ಯೆ: ಇಡಿ 173 ಎಸ್ ಎಲ್ ಬಿ 80, ದಿನಾಂಕ 11—5—82ರ ಪ್ರಕಾರ ಕಿರಿಯ ಕಾಲೇಜುಗಳಲ್ಲಿನ ಉಪನ್ಯಾಸಕರ ಶೇಕಡಾ 50ರಷ್ಟು ಹುದ್ದೆಗಳನ್ನು ಸದರಿ ಸಂಸ್ಥೆಯು ವತಿಯಿಂದ ನಡೆಯುತ್ತಿರುವ ಪ್ರೌಢಶಾಲೆಯಲ್ಲಿನ ಅರ್ಹ ಶಿಕ್ಷಕರಿಂದ ಬಡ್ತಿ ನೀಡುವ ಮೂಲಕ ತುಂಬಿರತಕ್ಕದ್ದು;

5. ಶಿಕ್ಷಕರು : ಉಪನ್ಯಾಸಕರಿಗೆ ನಿಯಮಾನುಸಾರ ನಿಗದಿಪಡಿಸಿರುವ ಕೆಲಸದ ಹೊರೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು;

6. ಸದರಿ ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ ಮತ್ತು ಮಂಜೂರಾತಿಯನ್ನು ಹೊಂದಿರತಕ್ಕದ್ದು. ನೇಮಕಾತಿ ಹಾಗೂ ಮೀಸಲಾತಿ ನಿಯಮಗಳನ್ನು ಪಾಲಿಸಿರತಕ್ಕದ್ದು;

7. ದಿನಾಂಕ 1·6·92ರ ನಂತರ ಮಾಡಲಾದ ನೇಮಕಾತಿಗಳನ್ನು ಅನುದಾನಕ್ಕೆ ಒಳಪಡಿಸುವ ಮುನ್ನ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಿರುವುದನ್ನು ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡದ ಸಂಸ್ಥೆಗಳಲ್ಲಿ ಶೇಕಡಾ 50ರಷ್ಟು ಪರಿಶಿಷ್ಟ ಜಾತಿ ಮತ್ತು ಪಂಗಡದ ಸಿಬ್ಬಂದಿಯನ್ನು ನೇಮಿಸಿಕೊಂಡು ಅನುಪಾತವನ್ನು ಕಾಯ್ದುಕೊಂಡು ಬಂದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ದಿನಾಂಕ 1·6·92ಕ್ಕಿಂತ ಹಿಂದಿನ ಪ್ರಕರಣಗಳಲ್ಲಿ ನೇಮಕಾತಿ ದಿನಾಂಕ 1·6·92ಕ್ಕಿಂತ ಪೂರ್ವದಲ್ಲಿ ಆಗಿರುವ ಬಗ್ಗೆ ಸರ್ಕಾರಿ ಸುತ್ತೋಲೆ ಸಂಖ್ಯೆ: ಇಡಿ 237: ಟಿಪಿಯು 95, ದಿನಾಂಕ 22—1—96ರಲ್ಲಿ ನೀಡಿರುವ ಸೂಚನೆಗಳ ಪ್ರಕಾರ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು;

8. ಈ ಹುದ್ದೆಗಳನ್ನು ಅನುದಾನಕ್ಕೆ ಒಳಪಡಿಸುವಾಗ ಈ ಬಗ್ಗೆ ಆದೇಶ ಹೊರಡಿಸಿದ ದಿನಾಂಕದಿಂದ ಮಾತ್ರ ವೇತನ ನಿಗದಿಪಡಿಸಿ, ಬಿಡುಗಡೆ ಮಾಡತಕ್ಕದ್ದು. ಯಾವುದೇ ಸಂದರ್ಭದಲ್ಲಿಯೂ ಹಿಂದಿನ ಬಾಕಿಯನ್ನು ನೀಡತಕ್ಕದ್ದಲ್ಲ. ಆದರೆ ಅವರುಗಳು ಸಲ್ಲಿಸಿದ ಹಿಂದಿನ ಸೇವೆಯನ್ನು ರಜಾ ಮತ್ತು ನಿವೃತ್ತಿ ವೇತನ ಸೌಲಭ್ಯಗಳಿಗೆ ಮಾತ್ರ ಅರ್ಹತಾದಾಯಕ ಸೇವೆಯೆಂದು ಪರಿಗಣಿಸಬಹುದು.

9. ಈ ಬಗ್ಗೆ ಹೊರಡಿಸಲಾಗುವ ಆದೇಶದ ಪ್ರತಿಗಳನ್ನು ಸರ್ಕಾರಕ್ಕೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮತ್ತು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಕಳುಹಿಸತಕ್ಕದ್ದು.

ಮೇಲ್ಕಂಡ ಷರತ್ತುಗಳಿಗೆ ಒಳಪಟ್ಟು ಹೆಚ್ಚುವರಿ ವಿಭಾಗಗಳು :: ವಿಷಯಗಳನ್ನು ಅನುದಾನಕ್ಕೆ ಒಳಪಡಿಸುವ ಅಧಿಕಾರವನ್ನು ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳಿಗೆ, ಖಾಸಗಿ ಅನುದಾನಿತ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಜಂಟಿ ನಿರ್ದೇಶಕರುಗಳಿಗೆ ಮತ್ತು ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ:166:ವೆಚ್ಚ 3 : 06 : ದಿನಾಂಕ 19.6.96ರಲ್ಲಿ ನೀಡಿರುವ ಸಹಮತಿಯನುಸಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಸಹಿ)
(ಅಂಶು ಭಾರದ್ವಾಜ್)
ಸರ್ಕಾರದ ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ.

(ನಕಲು)

---

**ಕರ್ನಾಟಕ ಸರ್ಕಾರ**

(ಸಾರ್ವಜನಿಕ ಶಿಕ್ಷಣ ಇಲಾಖೆ)

ಸಂಖ್ಯೆ: ಸಿ8(4)ಶಾಶಿಅ:ಹೆ.ವಿ.2:95—96

ಆಯುಕ್ತರ ಕಛೇರಿ,
ನೃಪತುಂಗ ರಸ್ತೆ,
ಬೆಂಗಳೂರು, ದಿನಾಂಕ 14—11—96

**ಜ್ಞಾ ಪ ನಾ**

ಸರ್ಕಾರದ ಆದೇಶ ಸಂಖ್ಯೆ: ಇಡಿ 155 ಎಸ್ ಓ ಹೆಚ್ 95 (ಭಾ), ದಿನಾಂಕ 28.10.96ರ ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಹಾಗೂ ಸರ್ಕಾರದ ಆದೇಶದಲ್ಲಿ ನೀಡಿರುವ ಸೂಚನೆಯನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಲಾಗಿದೆ.

(ಸಹಿ)
ನಿರ್ದೇಶಕರು
ಪ್ರೌಢ ಶಿಕ್ಷಣ.

1. ವಿಭಾಗೀಯ ಸಹ ನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲಬರ್ಗ ವಿಭಾಗ,
2. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ

ಪ್ರತಿಯನ್ನು:—

1. ಹಿರಿಯ ಸಹಾಯಕ ನಿರ್ದೇಶಕರು (ಆಯುಕ್ತರ ಆಪ್ತ ಶಾಖೆ);
2. ಆಪ್ತ ಸಹಾಯಕರು ನಿರ್ದೇಶಕರು (ಪ್ರೌಢ ಶಿಕ್ಷಣ),
3. —ಡಿಟೋ— ಸಹ ನಿರ್ದೇಶಕರು (ಶಾಲಾ ಶಿಕ್ಷಣ);
4. ಉಪ ನಿರ್ದೇಶಕರು, ಪ್ರೌಢ ಶಿಕ್ಷಣ;
5. ಮುಖ್ಯ ಲೆಕ್ಕಪತ್ರಾಧಿಕಾರಿಗಳು, ಆಯುಕ್ತರ ಕಛೇರಿ;
6. ಅಧೀಕ್ಷಕರು, ಸಿಬ್ಬಂದಿ—8;
7. ಸಿ8 ಶಾಖೆಯ ಎಲ್ಲಾ ಕಾರ್ಯನಿರ್ವಾಹಕರಿಗೆ;
8. ಹೆಚ್ಚಿನ ಪ್ರತಿ